# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **620**

**ಮಾನ್ಯ ಸದಸ್ಯರ ಹೆಸರು** : **ಶ್ರೀ ಕೆ.ವಿ ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ** : **21.02.2022**

**ಉತ್ತರಿಸಬೇಕಾದ ಸಚಿವರು** : **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಸರ್ಕಾರಿ ಆಸ್ಪತ್ರೆಗಳಲ್ಲಿ ಮಕ್ಕಳಿಗೆ ನೀಡುವ ಲಸಿಕೆಗಳು ಯಾವುವು; (ವಯೋಮಾನ ಮತ್ತು ಲಸಿಕೆಯ ಪ್ರಕಾರಗಳ ಸಂಪೂರ್ಣ ವಿವರ ನೀಡುವುದು) | ಸರ್ಕಾರಿ ಆಸ್ಪತೆಗಳಲ್ಲಿ ಮಕ್ಕಳಿಗೆ ನೀಡುವ ಲಸಿಕೆಗಳ ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ) | 2019-20, 2020-21 ಮತ್ತು 2021-22ನೇ ಸಾಲಿನಲ್ಲಿ ಸರ್ಕಾರ ಮಕ್ಕಳ ಲಸಿಕೆಗಳ ಖರೀದಿ ಮತ್ತು ವಿತರಣೆಗಾಗಿ ಮಾಡಿರುವು ವೆಚ್ಚವೆಷ್ಟು:(ವಿವರಣೆ ನೀಡುವುದು); | ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯ ಎಲ್ಲಾ ಲಸಿಕೆಗಳನ್ನು ಭಾರತ ಸರ್ಕಾರವೇ ಸರಬರಾಜು ಮಾಡಿರುತ್ತದೆ. ಆದ್ದರಿಂದ ರಾಜ್ಯ ಸರ್ಕಾರದಿಂದ ಲಸಿಕೆಯನ್ನು ಖರೀದಿ ಮಾಡಿರುವುದಿಲ್ಲ. |
| ಇ) | ಲಸಿಕೀಕರಣದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು; ಲಸಿಕೀಕರಣದ ಮಾರ್ಗಸೂಚಿ ನೀಡುವುದು; | • ಭಾರತ ಸರ್ಕಾರದಿಂದ ಕಾಲಕಾಲಕ್ಕೆ ಪರಿಚಯಿಸಲಾಗುವ ಹೊಸ ಲಸಿಕೆಗಳ ಕುರಿತು ಪೋಸ್ಟರ್, ಬ್ಯಾನರ್, ವೀಡಿಯೋ ಹಾಗೂ ಕರ ಪತ್ರಗಳನ್ನು ಬಳಸಿ ಜಾಗೃತಿ ಮೂಡಿಸಲಾಗುತ್ತಿದೆ.<br>• ಐಇಸಿ ಕಾರ್ಯಕ್ರಮಗಳಾದ ಬಸ್ ಬ್ರ್ಯಾಂಡಿಂಗ್ ಆಟೋ ಬ್ರ್ಯಾಂಡಿಂಗ್, ರೈಲು ಬ್ರ್ಯಾಂಡಿಂಗ್, ರೇಡಿಯೋ ಜಿಂಗಲ್ಸ್, ಟಿವಿ ಜಾಹಿರಾತು, ಪತ್ರಿಕಾ ಪ್ರಕಟಣೆ, ರೈಲು ಬೋಗಿಗಳಲ್ಲಿ ಜಾಹಿರಾತು ಪ್ರಕಟಣೆ ಸಾಮಾಜಿಕ ಜಾಲತಾಣ, ಡಿಜಿಟಲ್ ಮೀಡಿಯಾ, ಎಲ್ಇಡಿ ಸಂಚಾರಿ ವಾಹನಗಳ ಮೂಲಕ ಜಾಹಿರಾತು ನೀಡಿ ಲಸಿಕಾ ಕಾರ್ಯಕ್ರಮದ ಅರಿವು ಮತ್ತು ಜಾಗೃತಿ ಮೂಡಿಸಲಾಗಿದೆ.<br>• ರೇಡಿಯೋ ಹಾಗೂ ದೂರದರ್ಶನ ಸಂದರ್ಶನದ ಮೂಲಕ ಲಸಿಕಾಕರಣ ಕುರಿತು ಅರಿವು ಮತ್ತು ಜಾಗೃತಿ ಮೂಡಿಸಲಾಗುತ್ತಿದೆ. |

| | | |
|---|---|---|
| ಈ) | ಬೆಳಗಾವಿಯಲ್ಲಿ ಜನವರಿ 2022ರಲ್ಲಿ ನಡೆದ ಲಸಿಕೀಕರಣ ದುರಂತಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು; | ಬೆಳಗಾವಿ ಜಿಲ್ಲೆಯಲ್ಲಿ ಜನವರಿ 2022ರಲ್ಲಿ ನಡೆದ ಲಸಿಕಾಕರಣದ ದುರಂತಕ್ಕೆ ಕಾರಣರಾದ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ ಹಾಗೂ ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲಾಗುತ್ತಿದೆ. |
| ಉ) | ಈ ರೀತಿಯ ಘಟನೆಗಳು ಮರುಕಳಿಸದಂತೆ ಮಾಡಲು ಮತ್ತು ಸರ್ಕಾರ ಕೈಗೊಂಡ ಕ್ರಮಗಳೇನು? | • ಎಲ್ಲಾ ಜಿಲ್ಲೆಗಳಿಗೆ ಭಾರತ ಸರ್ಕಾರದ ಮಾರ್ಗದರ್ಶನದಂತೆ ಲಸಿಕಾಕರಣ ನಡೆಸಲು ಸೂಚನೆ ಹಾಗೂ ತಪ್ಪಿದ್ದಲ್ಲಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಎಚ್ಚರಿಕೆ ನೋಟೀಸ್ ನೀಡಲಾಗಿದೆ.<br>• ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಪ್ರಾಥಮಿಕ ಆರೋಗ್ಯ ಕೇಂದ್ರದ ಅಧಿಕಾರಿಗಳವರೆಗೂ ಎಲ್ಲಾ ಜಿಲ್ಲೆಗಳಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಕುರಿತು ಪುನರ್ ಮನನ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದೆ. |

**ಸಂಖ್ಯೆ: ಆಕುಕ 03 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಸಾರ್ವತ್ರಿಕ ಲಸಿಕಾ ವೇಳಾಪಟ್ಟಿ

ಅನುಬಂಧ-

| ಲಸಿಕೆ | ಡೋಸ್ | ಶಿಫಾರಸ್ಸು ಮಾಡಲಾದ ವಯಸ್ಸು | ಪ್ರಮಾಣ | ನೀಡಬೇಕಾದ ಮಾರ್ಗ ಮತ್ತು ಸ್ಥಳ | ತಡೆಗಟ್ಟಬಹುದಾದ ರೋಗಗಳು |
|---|---|---|---|---|---|
| **ನವಜಾತ ಶಿಶುಗಳು ಮತ್ತು ಮಕ್ಕಳು** | | | | | |
| ಬಿ.ಸಿ.ಜಿ | | ಜನಿಸಿದಾಗ | 0.05 ಮಿಲಿ | ಚರ್ಮದ ಒಳಗೆ (ಎಡ ಮೇಲು ತೋಳು) | ಬಾಲಕ್ಷಯ |
| ಹೆಪಟೈಟಿಸ್ ಬಿ | ಜನಿಸಿದಾಗಿನ ಡೋಸ್ | ಜನಿಸಿದಾಗ | 0.5 ಮಿಲಿ | ಸ್ನಾಯುಗಳ ಒಳಗೆ (ಎಡ ಮಧ್ಯದ ತೊಡೆಯ ಆಂಟಿರೊ ಲ್ಯಾಟರಲ್ ಬದಿ) | ಹೆಪಟೈಟಿಸ್ ಬಿ |
| ಓ.ಪಿ.ವಿ | ಶೂನ್ಯ ಡೋಸ್ | ಜನಿಸಿದಾಗ | 2 ಹನಿ | ಬಾಯಿಯ ಮೂಲಕ | ಪೋಲಿಯೋ |
| | ಮೊದಲನೆಯದು | 6 ವಾರ | 2 ಹನಿ | ಬಾಯಿಯ ಮೂಲಕ | |
| | ಎರಡನೆಯದು | 10 ವಾರ | 2 ಹನಿ | ಬಾಯಿಯ ಮೂಲಕ | |
| | ಮೂರನೆಯದು | 14 ವಾರ | 2 ಹನಿ | ಬಾಯಿಯ ಮೂಲಕ | |
| | ವರ್ಧಕ | 16–24 ತಿಂಗಳು | 2 ಹನಿ | ಬಾಯಿಯ ಮೂಲಕ | |
| ಪೆಂಟಾವೆಂಲೆಟ್ | ಮೊದಲನೆಯದು | 6 ವಾರ | 0.05 ಮಿಲಿ | ಸ್ನಾಯುಗಳ ಒಳಕ್ಕೆ (ಎಡ ಮಧ್ಯದ ತೊಡೆಯ ಆಂಟಿರೊ ಲ್ಯಾಟರಲ್ ಬದಿ) | ಗಂಟಲು ಮಾರಿ, ನಾಯಿ ಕೆಮ್ಮು, ಧನುರ್ವಾಯು, ಹಿಬ್ ಇನ್‌ಫ್ಲೂಯೆಂಜ಼ ಬಿ ಮತ್ತು ಹೆಪಟೈಟಿಸ್ ಬಿ |
| | ಎರಡನೆಯದು | 10 ವಾರ | 0.05 ಮಿಲಿ | ಸ್ನಾಯುಗಳ ಒಳಕ್ಕೆ (ಎಡ ಮಧ್ಯದ ತೊಡೆಯ ಆಂಟಿರೊ ಲ್ಯಾಟರಲ್ ಬದಿ) | |
| | ಮೂರನೆಯದು | 14 ವಾರ | 0.05 ಮಿಲಿ | ಸ್ನಾಯುಗಳ ಒಳಕ್ಕೆ (ಎಡ ಮಧ್ಯದ ತೊಡೆಯ ಆಂಟಿರೊ ಲ್ಯಾಟರಲ್ ಬದಿ) | |
| ರೋಟಾ ವೈರಸ್ * | ಮೊದಲನೆಯದು | 6 ವಾರ | 2.5 ಮಿಲಿ | ಬಾಯಿಯ ಮೂಲಕ | ರೋಟಾ ವೈರಸ್ ಅತಿಸಾರ ಭೇದಿ |
| | ಎರಡನೆಯದು | 10 ವಾರ | 2.5 ಮಿಲಿ | ಬಾಯಿಯ ಮೂಲಕ | |
| | ಮೂರನೆಯದು | 14 ವಾರ | 2.5 ಮಿಲಿ | ಬಾಯಿಯ ಮೂಲಕ | |
| ಪಿಸಿವಿ | ಮೊದಲನೆಯದು | 6 ವಾರ | 0.5 ಮಿ.ಲಿ | ಬಲ ಮಧ್ಯ ತೊಡೆಯ ಹೊರಭಾಗದಲ್ಲಿ ಸ್ನಾಯುವಿನೊಳಗೆ) ನೀಡಲಾಗುತ್ತದೆ | ನ್ಯೂಮೋಕೊಕಲ್ ಬಾಯಿಲೆ |
| | ಎರಡನೆಯದು | 14 ವಾರ | 0.5 ಮಿ.ಲಿ | | |
| | ವರ್ಧಕ | 9ತಿಂಗಳು | 0.5 ಮಿ.ಲಿ | | |
| ಐ.ಪಿ.ವಿ | ಮೊದಲನೆಯದು | 6 ವಾರ | 0.1 ಮಿಲಿ | ಚರ್ಮದ ಒಳಕ್ಕೆ (ಬಲ ಮೇಲು ತೋಳು) | ಪೋಲಿಯೋ |
| | ಎರಡನೆಯದು | 14 ವಾರ | 0.1 ಮಿಲಿ | ಚರ್ಮದ ಒಳಕ್ಕೆ (ಬಲ ಮೇಲು ತೋಳು) | |
| ಎಮ್.ಆರ್ | ಮೊದಲನೆಯದು | 9–12 ತಿಂಗಳು | 0.5 ಮಿಲಿ | ಚರ್ಮದಡಿಗೆ (ಬಲ ಮೇಲು ತೋಳು) | ದಡಾರ ಮತ್ತು ರುಬೆಲ್ಲಾ |
| | ಎರಡನೆಯದು | 16–24 ತಿಂಗಳು | 0.5 ಮಿಲಿ | ಚರ್ಮದಡಿಗೆ (ಬಲ ಮೇಲು ತೋಳು) | |
| ಜೆ.ಇ * | ಮೊದಲನೆಯದು | 9–12 ತಿಂಗಳು | 0.5 ಮಿಲಿ | ಚರ್ಮದಡಿಗೆ (ಎಡ ಮೇಲು ತೋಳು) | ಮೆದುಳು ಜ್ವರ |
| | ಎರಡನೆಯದು | 16–24 ತಿಂಗಳು | 0.5 ಮಿಲಿ | ಚರ್ಮದಡಿಗೆ (ಎಡ ಮೇಲು ತೋಳು) | |
| ಡಿ.ಪಿ.ಟಿ | ಮೊದಲ ವರ್ಧಕ | 16–24 ತಿಂಗಳು | 0.5 ಮಿಲಿ | ಸ್ನಾಯುಗಳ ಒಳಕ್ಕೆ (ಎಡ ಮಧ್ಯದ ತೊಡೆಯ ಆಂಟಿರೊ ಲ್ಯಾಟರಲ್ ಬದಿ) | ಗಂಟಲು ಮಾರಿ, ನಾಯಿ ಕೆಮ್ಮು ಮತ್ತು ಧನುರ್ವಾಯು |
| | ಎರಡನೇ ವರ್ಧಕ | 5–6 ವರ್ಷ | 0.5 ಮಿಲಿ | ಸ್ನಾಯುಗಳ ಒಳಕ್ಕೆ (ಮೇಲು ತೋಳು) | |
| ಟಿಡಿ | ಮೊದಲನೆಯದು | 10 ವರ್ಷ | 0.5 ಮಿಲಿ | ಸ್ನಾಯುಗಳ ಒಳಕ್ಕೆ (ಮೇಲು ತೋಳು) | ಗಂಟಲು ಮಾರಿ ಮತ್ತು ಧನುರ್ವಾಯು |
| | ಎರಡನೆಯದು | 16 ವರ್ಷ | 0.5 ಮಿಲಿ | ಸ್ನಾಯುಗಳ ಒಳಕ್ಕೆ (ಮೇಲು ತೋಳು) | |
| **ಗರ್ಭಿಣಿ ಮಹಿಳೆಯರು** | | | | | |
| ಟಿಡಿ | ಮೊದಲನೆಯದು | ಸಾಧ್ಯವಾದಷ್ಟು ಮೊದಲು | 0.5 ಮಿಲಿ | ಸ್ನಾಯುಗಳ ಒಳಕ್ಕೆ (ಮೇಲು ತೋಳು) | ಗಂಟಲು ಮಾರಿ ಮತ್ತು ಧನುರ್ವಾಯು |
| | ಎರಡನೆಯದು | ಮೊದಲನೆ ಡೋಸ್ ನೀಡಿದ 4 ವಾರಗಳ ನಂತರ | 0.5 ಮಿಲಿ | ಸ್ನಾಯುಗಳ ಒಳಕ್ಕೆ (ಮೇಲು ತೋಳು) | |
| | ವರ್ಧಕ | ಕಳೆದ 3 ವರ್ಷಗಳಲ್ಲಿ ಗರ್ಭಿಣಿಯಾಗಿದ್ದಾಗ 2 ಟಿಡಿ ಡೋಸ್‌ಗಳನ್ನು ಪಡೆದುಕೊಂಡಿದ್ದಲ್ಲಿ | 0.5 ಮಿಲಿ | ಸ್ನಾಯುಗಳ ಒಳಕ್ಕೆ (ಮೇಲು ತೋಳು) | |

1. ಮಗು ಹುಟ್ಟಿದ ಕೂಡಲೆ ಬಿಸಿಜಿ ಲಸಿಕೆ ನೀಡದಿದ್ದಲ್ಲಿ ವಯಸ್ಸು ಒಂದು ತಿಂಗಳಾದಾಗ ಡೋಸ್ 0.1 ಮಿಲಿ ನೀಡಬೇಕು.

2. ಜೆ.ಇ ಲಸಿಕೆಗಳನ್ನು ಆಯ್ದ ಜಿಲ್ಲೆಗಳಾದ ಬಳ್ಳಾರಿ, ರಾಯಚೂರು, ಕೊಪ್ಪಳ ವಿಜಯಪುರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಧಾರವಾಡ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಮಾತ್ರ ನೀಡಲಾಗುತ್ತಿದೆ.

3. ಮಗುವಿನ ಎರಡನೇ ವರ್ಷದಲ್ಲಿ ಮೊದಲನೆ ಬಾರಿ ಲಸಿಕೆ ಪಡೆಯಲು ಬಂದಾಗ ಪೆಂಟಾವಲೆಂಟ್ 123 ಬದಲಾಗಿ ಡಿಪಿಟಿ 123 ನೀಡುವುದು